# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ

ಗೋ ರಕ್ಷಕ ಸೇವಕ ಪಾಲಕ ಭಕ್ತ
ಇವರಲ್ಲಿ ನೀವು ಯಾರು?

ಸಂಪುಟ : 38 ಸಂಚಿಕೆ : 5 ದುರ್ಮುಖಿ–ಆಶ್ವಯುಜ ಕಲಿಯುಗಾಬ್ದ 5118 15–10–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಕೇರಳದಲ್ಲಿ ಕಮ್ಯುನಿಸ್ಟರ ರಕ್ತಕ್ರೌರ್ಯ: ಬುದ್ಧಿಜೀವಿಗಳ ಮಹಾಮೌನ?

ರಾಜಕೀಯ ಹಿಂಸಾಚಾರಕ್ಕೆ ಯಥೇಚ್ಛ ಉದಾಹರಣೆಗಳನ್ನು ನೀಡಿರುವ ರಾಜ್ಯವೆಂದರೆ ನೆರೆಯ ಕೇರಳ. ದೇವರ ಸ್ವಂತ ನಾಡು (God's own country) ಎಂಬ ಹೆಗ್ಗಳಿಕೆಯಿದ್ದರೂ ಅತಿಕ್ಷುಲ್ಲಕ ವಿಚಾರಗಳಿಗೂ ನೆತ್ತರು ಹರಿಸುವಷ್ಟು ಸಲೀಸಾಗಿ ರಾಜಕೀಯ ಹಿಂಸಾಚಾರಕ್ಕೆ ಹೆಸರುವಾಸಿಯಾಗಿರುವುದು ಕೇರಳ ಜನತೆಯ ವಿಪರ್ಯಾಸ. ಕಳೆದ 50 ವರ್ಷಗಳಲ್ಲಿ 300ಕ್ಕೂ ಹೆಚ್ಚು ಯುವಕರು ಈ ರಾಜಕೀಯ ಹಿಂಸಾಚಾರಕ್ಕೆ ಪ್ರಾಣ ಕಳೆದುಕೊಂಡಿದ್ದಾರೆ. ಸಾವಿರಕ್ಕೂ ಅಧಿಕಮಂದಿ ಬೆರಳು–ಕೈ–ಕಾಲು ಕಳೆದುಕೊಂಡು ಜೀವನಪರ್ಯಂತ ಯಾತನೆ ಅನುಭವಿಸುತ್ತಿದ್ದಾರೆ. ಅಪಾರಪ್ರಮಾಣದ ಆಸ್ತಿ–ಪಾಸ್ತಿ ನಷ್ಟವಾಗಿದೆ. ಮನೆ–ಮಠ ಕಳೆದುಕೊಂಡವರ ಪಾಡು ಹೇಳತೀರದು.

ಇಷ್ಟಕ್ಕೂ, ಈ ಎಲ್ಲ ಹಿಂಸಾಚಾರದ ಕೃತ್ಯಗಳಲ್ಲಿ ಹತ್ಯೆಗೊಳಗಾದದ್ದು, ಹಲ್ಲೆಗೊಳಗಾಗುತ್ತಿರುವವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು. ಕೊಲೆ ಹಿಂಸೆ ಮಾಡಿದವರಲ್ಲಿ ಬಹುಪಾಲು ಕಮ್ಯೂನಿಸ್ಟ್ ಅಥವಾ ಮಾರ್ಕಿಸ್ಟರದ್ದೇ. ಕೆಲವು ಇಸ್ಲಾಮಿಕ್ ಸಂಘಟನೆಗಳು, ಮಿಷನರಿಗಳೂ ಕೆಲವು ಬಾರಿ ಹಿಂಸೆಗಿಳಿದ ಉದಾಹರಣೆಗಳೂ ಇವೆ. ಒಟ್ಟಿನಲ್ಲಿ 270ಕ್ಕೂ ಅಧಿಕ ಮಂದಿ ಆರೆಸ್ಸೆಸ್ ಸ್ವಯಂಸೇವಕರು ಹತ್ಯೆಯಾಗಿದ್ದಾರೆ ಎನ್ನುತ್ತದೆ ಒಂದು ಲೆಕ್ಕಾಚಾರ! ರಾಷ್ಟ್ರೀಯವಾದಿ ಸಾಮಾಜಿಕ ಕಾರ್ಯಕರ್ತರ ಹತ್ಯೆಗೆ ವಿರೋಧಿಗಳೆಲ್ಲ ಒಟ್ಟಾದ ಉದಾಹರಣೆಗಳು ಹೇರಳವಾಗಿವೆ. ಇಷ್ಟೊಂದು ಅಗಾಧ ಪ್ರಮಾಣದ ರಾಜಕೀಯಹತ್ಯೆಗಳು ಭಾರತದ ಯಾವ ರಾಜ್ಯದಲ್ಲೂ ವರದಿಯಾಗಿಲ್ಲ. ಕೇರಳದಲ್ಲಿನ ಈ ಕಮ್ಯೂನಿಸ್ಟ್ ರಕ್ತಪಾತದ ಕತ್ತಲೆಯ ಪುಟಗಳು ಇದೀಗ ರಾಷ್ಟ್ರಮಟ್ಟದಲ್ಲಿ ಅನಾವರಣಗೊಳ್ಳುತ್ತಿದೆ. ಮುಖವಾಡ ಬಯಲಾಗುತ್ತಿದೆ.





ಕೇರಳದ ಇತಿಹಾಸದಲ್ಲೇ ಅತಿ ಭಯಾನಕ ಹತ್ಯೆ ಎಂದರೆ ಕೆ.ಟಿ. ಜಯಕೃಷ್ಣನ್ ಮಾಸ್ತರ್ ಅವರದ್ದು. 1999ರ ಡಿಸೆಂಬರ್ 1ರಂದು ಕಣ್ಣೂರಿನ ಪನೂರ್ ಬಳಿಯ ಕೂತುಪರಂಬು ಎಂಬಲ್ಲಿನ ಮೊಕೇರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಅವರು, ಎಂದಿನಂತೆ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದಾಗಲೇ, ವಿದ್ಯಾರ್ಥಿಗಳ ಎದುರೇ ದಾರುಣವಾಗಿ ಹತ್ಯೆಗೀಡಾದವರು. ಆರೆಸ್ಸೆಸ್ ಸ್ವಯಂಸೇವಕರಾಗಿದ್ದ ಕೆ.ಟಿ. ಜಯಕೃಷ್ಣನ್ ಮಾಸ್ತರ್ ಭಾರತೀಯ ಜನತಾ ಯುವ ಮೋರ್ಚಾದ ಕೇರಳ ರಾಜ್ಯ ಉಪಾಧ್ಯಕ್ಷರಾಗಿ ಜವಾಬ್ದಾರಿ ಹೊಂದಿದ್ದರು.

## ಕಳಚಿದ ಮುಖವಾಡ

1920ರ ದಶಕದಲ್ಲಿ ಭಾರತಕ್ಕೆ ಕಾಲಿಟ್ಟ ಕಮ್ಯೂನಿಸ್ಟ್ ವಿಚಾರಧಾರೆ ಕೇರಳಿಗರನ್ನು ಅತಿಯಾಗಿ ಆಕರ್ಷಿಸಿತು. ದಶಕಗಳ ಹಿಂದೆಯೇ ಕೇರಳವನ್ನು ಚೆನ್ನಾಗಿ ಅರಿತಿದ್ದ ಸ್ವಾಮಿ ವಿವೇಕಾನಂದರು ಆ ರಾಜ್ಯವನ್ನು ಹುಚ್ಚಾಸ್ಪತ್ರೆ (Lunatic Asylum) ಎಂದಿದ್ದರು. ಅದು ಅಲ್ಲಿನ ಮತಿಭ್ರಾಂತ ಸಾಮಾಜಿಕ ವ್ಯವಸ್ಥೆಯನ್ನು ಮನಗಂಡು ನೇರವಾಗಿ ಹೇಳಿದ ಮಾತಾಗಿತ್ತು. ಕಮ್ಯೂನಿಸ್ಟ್ ವಿಚಾರಧಾರೆಯನ್ನು ಅಪ್ಪಿಕೊಳ್ಳುವ ಭರದಲ್ಲಿ ಈ ನೆಲದ ಮೂಲಗುಣವಾದ ಸಹನೆ–ತಾಳ್ಮೆ–ಕ್ಷಮೆ–ದಯೆ–ಕರುಣೆ ಇವು ಯಾವುದಕ್ಕೂ ಕ್ಯಾರೇ ಅನ್ನಲಿಲ್ಲ. 'ಕ್ರಾಂತಿ' ಮಾಡುತ್ತೇವೆ ಎಂಬ ಭ್ರಾಂತಿಯಲ್ಲಿ, ಸಮಾಜ ಪರಿವರ್ತನೆಯೆಂಬ ನೆಪವೊಡ್ಡಿ ಕೇರಳದ ಸಾಮಾಜಿಕ ಜನಜೀವನವನ್ನೇ ಬುಡಮೇಲುಗೊಳಿಸಿದ್ದು ಕಮ್ಯೂನಿಸ್ಟ್ ವಿಚಾರವಾದ. ಶೋಷಿತರಿಗೆ ನೆರವು ನೀಡುವ ಸುಳ್ಳು ಘೋಷಣೆಗಳು, ಸಮಾನತೆ ಸಾಧಿಸುತ್ತೇವೆ ಎಂಬ ಪೊಳ್ಳು ಮಾತುಗಳು, ಮಾನವತೆಯನ್ನು ಎತ್ತಿ ಹಿಡಿಯುವ ಮಾರ್ಗ ಎಂಬ ಡೋಂಗಿ ತನವೇ ಕಮ್ಯೂನಿಸ್ಟ್ ನಾಯಕರ ವರಸೆಯಾಗಿತ್ತು. ಜಾತೀಯತೆಯ ವ್ಯಸನದಿಂದ ಕಂಗೆಟ್ಟಿದ್ದ ಕೇರಳರ ಜನತೆ ಸ್ವಾತಂತ್ರ್ಯಾನಂತರ ಕಮ್ಯೂನಿಸ್ಟ್ ಆಡಳಿತವನ್ನೇ ಆಯ್ಕೆ ಮಾಡಿದರು. 1957ರಲ್ಲಿ ಇ.ಎಂ.ಎಸ್. ನಂಬೂದರಿಪಾಡ್ ನೇತೃತ್ವದಲ್ಲಿ ವಿಶ್ವದ ಮೊತ್ತಮೊದಲ ಚುನಾಯಿತ ಸರ್ಕಾರ ಕೇರಳದಲ್ಲಿ ಅಸ್ತಿತ್ವಕ್ಕೆ ಬಂತು! ಇವತ್ತು ಕೇರಳವನ್ನು ಕಮ್ಯೂನಿಸ್ಟ್ ಸರ್ಕಾರ ಆಳುತ್ತಿದೆ. ಪ್ರಸ್ತುತ ವರ್ಷಗಳಲ್ಲಿ ಕೇರಳದ ಸಾಮಾಜಿಕ–ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಹೇಳಿಕೊಳ್ಳುವ ಶೈಕ್ಷಣಿಕ–ವೈದ್ಯಕೀಯ–ಕ್ರೀಡಾ–ಉದ್ದಿಮೆಗಳಾಗಲೀ ಯಾವುದೂ ಇಲ್ಲ. 'ಪ್ರಗತಿ' ತರುವವರು ಅಭಿವೃದ್ಧಿಗೇ ಮಾರಕವಾದರು. 'ಹಸಿದ ಹೊಟ್ಟೆಗೆ ಅನ್ನ ಬೇಕು, ಕಂಪ್ಯೂಟರ್ ಬೇಡ' ಎಂದು ವಿರೋಧಿಸಿದ ಕಮ್ಯುನಿಸ್ಟ್ ನಾಯಕರ ಮಕ್ಕಳು ಇಂದು ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದಾರೆ! ಪೊಳ್ಳುತನದ ಪರಾಕಾಷ್ಠೆ!

1925ರಲ್ಲಿ ಪ್ರಾರಂಭಗೊಂಡ ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಟುವಟಿಕೆಗಳೂ ಕೇರಳ ತಲುಪಿದ್ದು; ಕಮ್ಯೂನಿಸ್ಟ್ ವಿಚಾರಧಾರೆ ತಲಪಿದ ವೇಳೆಯಲ್ಲೇ. ಅದರೆ ಸದ್ದಿಲ್ಲದೆ, ಸಾರ್ವಜನಿಕವಾಗಿ ಮೌನಿಯಾಗಿಯೇ ಸಂಘದ ಚಟುವಟಿಕೆಗಳು ಕೇರಳದುದ್ದಕ್ಕೂ ವ್ಯಾಪಿಸಿತು. ಸಾವಿರಾರು ಯುವಕರು ಸಂಘ ಪ್ರತಿಪಾದಿಸುತ್ತಿದ್ದ ರಾಷ್ಟ್ರೀಯ ವಿಚಾರಗಳತ್ತ ಆಕರ್ಷಿತರಾದರು. ನಿಸ್ವಾರ್ಥ ಸಮಾಜಸೇವೆಗೆ ಮುಂದಾದರು. ಪರಿಣಾಮವಾಗಿ ಇಡೀ ಭಾರತದಲ್ಲೇ ಅತಿ ಹೆಚ್ಚು ಆರೆಸ್ಸೆಸ್ ಶಾಖೆ–ಚಟುವಟಿಕೆಗಳುಳ್ಳ ರಾಜ್ಯ ಎಂಬ ಮನ್ನಣೆಗೂ ಕೇರಳ ಪಾತ್ರವಾಯಿತು. ಆರೆಸ್ಸೆಸ್ ವಿಚಾರಧಾರೆ ಅಥವಾ ರಾಷ್ಟ್ರೀಯ ವಿಚಾರದ ದೃಷ್ಟಿಕೋನಗಳು ಕೇರಳದ ಶಿಕ್ಷಣ–ಸಾಮಾಜಿಕ–ಸಾಹಿತ್ಯ ಹಾಗೂ ಸಿನಿಮಾರಂಗದ ಮೇಲೂ ಪ್ರಭಾವ ಬೀರಿತು.

ಅಷ್ಟೇಅಲ್ಲ, ಅದಾಗಲೇ ಯುವಜನತೆಯನ್ನು ಆಕರ್ಷಿಸುವಲ್ಲಿ ಕಮ್ಯೂನಿಸ್ಟ್ ವಿಚಾರಧಾರೆ ವಿಫಲವಾಗುತ್ತಾ ಸಾಗಿತು. ಯೌವನದಲ್ಲಿ ಕಮ್ಯೂನಿಸ್ಟ್ ಆಗಿದ್ದ ಅನೇಕರು ಮದುವೆಯಾಗಿ ಮಕ್ಕಳಾದ ಮೇಲೆ, ಮಕ್ಕಳನ್ನು ಆರೆಸ್ಸೆಸ್ ಶಾಖೆಗಳಿಗೆ ಕಳುಹಿಸಿದ ಉದಾಹರಣೆಗಳೂ ನೂರಾರು.

ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರವಿರೋಧಿ ನೀತಿಗಳಿಂದ ಬೇಸತ್ತು ಕಮ್ಯೂನಿಸ್ಟ್ ಪಕ್ಷ ತೊರೆಯುವವರ ಸಂಖ್ಯೆ ಜಾಸ್ತಿಯಾಗುತ್ತಾ ಸಾಗಿತು. ಕೆಲವರು ಕಮ್ಯೂನಿಸ್ಟ್ ಪಕ್ಷದಿಂದ ಹೊರಬಂದು ಸುಮ್ಮನಿದ್ದರೆ, ಇನ್ನೂ ಅನೇಕರು ಆರೆಸ್ಸೆಸ್‌ನಲ್ಲಿ ಸಕ್ರಿಯರಾದರು. 1960ರ ದಶಕದಲ್ಲಿ ಕೇರಳದ ಅನೇಕ ಜಿಲ್ಲೆಗಳಲ್ಲಿ ಈ ರೀತಿ ಪ್ರವಾಹದ ಅಲೆ (Craze) ಎದ್ದು ಕಾಣುತ್ತಿತ್ತು. ಈ ಬೆಳವಣಿಗೆ

*(2ನೇ ಪುಟಕ್ಕೆ)*



**ಸದಾನಂದನ್ ಮಾಸ್ತರ್** ಎಂಬವರ ಹೋರಾಟಗಾಥೆ ನಿಜಕ್ಕೂ ಮೈನವಿರೇಳಿಸುವಂತದ್ದು. ಒಂದೊಮ್ಮೆ ಕಣ್ಣೂರಿನ ಕಮ್ಯೂನಿಸ್ಟ್ ಪಾರ್ಟಿಯಲ್ಲಿ ಸಕ್ರಿಯರಾಗಿದ್ದ ಸದಾನಂದನ್ ಮಾಸ್ತರ್‌ರಿಗೆ ಕ್ರಮೇಣ ಕಮ್ಯೂನಿಸ್ಟ್ ವಿಚಾರದ ಭಂಡತನದ ಅರಿವಾಯಿತು. ಆರೆಸ್ಸೆಸ್ಸಿನತ್ತ ಮುಖ ಮಾಡಿದ ಸದಾನಂದನ್ ಮಾಸ್ತರ್ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯರಾದರು. ಆರೆಸ್ಸೆಸ್‌ನ ಕಣ್ಣೂರು ಜಿಲ್ಲಾ ಸಹ ಕಾರ್ಯವಾಹ ಜವಾಬ್ದಾರಿ ವಹಿಸಿದರು. 'ಭಾರತ್ ಮಾತಾ ಕೀ ಜೈ' ಎಂಬ ಘೋಷಣೆಗಳೊಂದಿಗೆ ಸಾವಿರಾರು ಯುವಕರಿಗೆ ಪ್ರೇರಣೆಯಾಗಿದ್ದರು. ಇದನ್ನು ಸಹಿಸದ ಕಮ್ಯೂನಿಸ್ಟ್ ನಾಯಕರು ಸದಾನಂದನ್ ಮಾಸ್ತರ್‌ರ ಹತ್ಯೆಗೆ ಸಂಚು ರೂಪಿಸಿದರು. ಭೀಕರ ಆಕ್ರಮಣದಲ್ಲಿ ತನ್ನೆರಡೂ ಕಾಲುಗಳನ್ನು ಕಳೆದುಕೊಂಡರು. ಎರಡೂ ಕಾಲುಗಳು ಕತ್ತರಿಸಲ್ಪಟ್ಟಿದ್ದರೂ, ಈಗ 60ರ ಹರೆಯದ ಸದಾನಂದನ್ ಮಾಸ್ತರ್ ಕಮ್ಯೂನಿಸ್ಟರ ವಿರುದ್ಧ ಹೋರಾಡುತ್ತಿದ್ದಾರೆ.

**ಎಳಂತೋಟತ್ತಿಲ್ ಮನೋಜ್ ಎಂಬ ಯುವನಾಯಕ ಕಣ್ಣೂರಿನ ಆರೆಸ್ಸೆಸ್ ಹುಡುಗರ ಅಚ್ಚುಮೆಚ್ಚಿನ ಯುವಕ. ಕಮ್ಯೂನಿಸ್ಟರ ನೆಲೆಬೀಡಾದ ಕಣ್ಣೂರಿನಲ್ಲಿ ಅನೇಕ ಕಮ್ಯೂನಿಸ್ಟ್ ಯುವಕರು ಆರೆಸ್ಸೆಸ್ಸಿನತ್ತ ಮುಖ ಮಾಡಿದ ಸಂದರ್ಭ. ಇದಕ್ಕೆ ಕಾರಣ ಮನೋಜ್‌ರ ಅಪ್ರತಿಮ ಸ್ನೇಹಶೀಲ ವ್ಯಕ್ತಿತ್ವ. ಆದರೆ ಕಮ್ಯೂನಿಸ್ಟರ ರಕ್ತಕ್ರೌರ್ಯಕ್ಕೆ ಬಲಿಯಾದ ಮನೋಜ್ 2014ರ ಸೆಪ್ಟೆಂಬರ್ 1 ರಂದು ಕಣ್ಣೂರಿನ ಕದಿರೂರು ಎಂಬಲ್ಲಿ ಹಾಡುಹಗಲೇ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಯಿತು.**

ಕಮ್ಯೂನಿಸ್ಟ್ ನಾಯಕರಿಗೆ ಮೈನಡುಕ ಹುಟ್ಟಿಸಿತು. ಕಮ್ಯೂನಿಸ್ಟ್ ನೇತಾಗಣ ಚಿಂತಿತವಾಯಿತು.

ತಮ್ಮ ಜೊತೆಯಿದ್ದ ಯುವಕರು ರಾಷ್ಟ್ರೀಯ ವಿಚಾರಧಾರೆಯತ್ತ ಒಲವು ತೋರಿಸಿ, ವಲಸೆ ಹೋಗುವುದನ್ನು ತಡೆಯಲು ಅವರು ಬಳಸಿದ್ದು ರಕ್ತಕ್ರೌರ್ಯದ ಮಾರ್ಗವನ್ನು.

1965ರ ಮಾರ್ಚ್ 18ರಂದು ಕೇರಳದ ಈ ರಕ್ತದೋಕುಳಿಗೆ ಮುನ್ನುಡಿ ಬರೆಯಲಾಯಿತು. ಮಲಪ್ಪುರಂ ಜಿಲ್ಲೆಯ ತಾಣೂರ್ ಎಂಬಲ್ಲಿ ಸುಬ್ರಮಣಿಯಮ್ ಎಂಬ 18 ವರ್ಷದ ತರುಣನ ಹತ್ಯೆಯೊಂದಿಗೆ ಕೇರಳದ ರಾಜಕೀಯ ಹಿಂಸಾಚಾರ ಪ್ರಾರಂಭವಾಯಿತು. ಮೊನ್ನೆ ಸೆಪ್ಟೆಂಬರ್ 3, 2016ರಂದು ಕಣ್ಣೂರಿನ ಇರಿಟ್ಟಿ ಬಳಿಯ ಬಿನೀಷ್ ಎಂಬ ಯುವಕನ ಹತ್ಯೆಯ ತನಕ, ಈವರೆಗೆ ಇನ್ನೂರಕ್ಕೂ ಹೆಚ್ಚು ಆರೆಸ್ಸೆಸ್ ಸ್ವಯಂಸೇವಕರು ರಕ್ತಪಾತಕ್ಕೆ ಬಲಿಯಾಗಿದ್ದಾರೆ. ಹಿಂಸಾಚಾರ ನಡೆದಾಗಲೆಲ್ಲ ಅದನ್ನು ಖಂಡಿಸದೆ ಅದನ್ನು 'ಅತ್ಯಂತ ಶ್ರೇಷ್ಠತಮ ಕಾರ್ಯ' ಎಂಬಂತೆ ಬಿಂಬಿಸುವುದೂ ಕಮ್ಯೂನಿಸ್ಟರ ತಂತ್ರ. ಅನೇಕ ಕಮ್ಯೂನಿಸ್ಟ್ ನಾಯಕರು ಸಾರ್ವಜನಿಕವಾಗಿಯೇ ಕಮ್ಯೂನಿಸ್ಟ್ ಹಿಂಸಾಚಾರವನ್ನು ಒಪ್ಪಿಕೊಂಡಿದ್ದಾರೆ. ಅನೇಕ ಕೋರ್ಟ್ ಕೇಸುಗಳಲ್ಲಿ ನಾಯಕರುಗಳ ಅಪರಾಧಗಳು ಸಾಬೀತಾಗಿವೆ. ನೂರಾರು ಕಮ್ಯೂನಿಸ್ಟ್ ಕಾರ್ಯಕರ್ತರು ತಾವು ಮಾಡಿದ ಕೊಲೆ ಹಲ್ಲೆ ಕೃತ್ಯಗಳಿಗಾಗಿ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಇದೆಲ್ಲವೂ ಸಾರ್ವಜನಿಕವಾಗಿ ತಿಳಿದಿರುವ ವಿಚಾರ. ಇದರಲ್ಲಿ ಯಾವ ಗುಟ್ಟೂ ಅಡಗಿಲ್ಲ. ಕೇರಳದ ಜನತೆಗೆ ಕಮ್ಯೂನಿಸ್ಟ್ ಹಿಂಸಾಚಾರ ಹೊಸತೇನೂ ಅಲ್ಲ ಎಂಬಂತಾಗಿದೆ. ಆದರೂ ಕಮ್ಯೂನಿಸ್ಟ್ ನಾಯಕರು ಈ ಕುರಿತು ಎಳ್ಳಷ್ಟೂ ಚಿಂತಿತರಾಗಿಲ್ಲ. 'ಹಿಂಸೆ' – ಒಂದು ಸ್ವಾಭಾವಿಕ ಪ್ರಕ್ರಿಯೆ, ಎಂಬಂತೆ ಅವರ ಕಾರ್ಯವೈಖರಿ ಇದೆ. ಆದರೆ ಬಾಯಲ್ಲಿ ಮಾತ್ರ ಮಾನವತೆಯ ಮಾತು!

ಕಮ್ಯೂನಿಸ್ಟ್ ವಿಚಾರಧಾರೆಯನ್ನು ಬೆಂಬಲಿಸುವ ಅನೇಕ ಎಡಪಂಥೀಯ ವಿಚಾರವಾದಿಗಳು, ಬುದ್ಧಿಜೀವಿಗಳು ಕೇರಳದಲ್ಲಿ ನಡೆಯುತ್ತಿರುವ ಈ ಘೋರ ಹತ್ಯಾಕಾಂಡದ ಕುರಿತು ದಿವ್ಯಮೌನ ವಹಿಸುತ್ತಾರೆ. ಗಿರೀಶ್ ಕಾರ್ನಾಡ್, ಅಗ್ನಿ ಶ್ರೀಧರ್, ಜಿ.ಟಿ. ಗೋವಿಂದರಾವ್ ಸೇರಿದಂತೆ ಕರ್ನಾಟಕ ಅನೇಕ ಎಡಪಂಥೀಯ ವಿಚಾರಧಾರೆಯ ಐಕಾನ್‌ಗಳು 'ಜಾಣಕುರುಡು' ನಟಿಸುತ್ತಿದ್ದಾರೆ. ಮಾತೆತ್ತಿದರೆ ಮಾನವ ಹಕ್ಕುಗಳ ಉಲ್ಲಂಘನೆಯ ಕುರಿತು ಮಾತನಾಡುವ, ಈ ಬುದ್ಧಿಜೀವಿಗಳು ನಮ್ಮ ಪಕ್ಕದ ಕೇರಳದಲ್ಲಿನ ಕಮ್ಯೂನಿಸ್ಟ್ ರಕ್ತಪಾತದ ಕೃತ್ಯಗಳ ಕುರಿತು ಎಳ್ಳಷ್ಟೂ ಮಾತನಾಡಲಾರರು. ಹಿಂಸೆಯನ್ನು ನಿಲ್ಲಿಸುವುದಕ್ಕಾಗಿ ಜಲ್ಲಿಕಟ್ಟು ಇತ್ಯಾದಿ ರೈತರ ಪಾರಂಪರಿಕ ಆಚರಣೆಗಳನ್ನು ನಿಷೇಧಿಸಿ ಎಂದು ಬೊಬ್ಬೆಹಾಕುವ ಈ ಬುದ್ಧಿಜೀವಿಗಳು ಕೇರಳದ ಅಮಾಯಕ ರಾಷ್ಟ್ರೀಯವಾದಿ ಕಾರ್ಯಕರ್ತರ ಭೀಕರ ಹತ್ಯಾಕಾಂಡದ ಕುರಿತು ಬಾಯಿ ತೆರೆಯುವುದೇ ಇಲ್ಲ. 'ಕ್ರೌರ್ಯವೇ ನಮ್ಮ ದಾರಿ' ಎಂದು ಒಪ್ಪಲೂ ಸಿದ್ಧರಿಲ್ಲ; ಕ್ರೌರ್ಯವನ್ನು ನಿಲ್ಲಿಸಿ ಎಂದು ತಮ್ಮ ಕಾರ್ಯಕರ್ತರಿಗೆ ಹೇಳಲೂ ತಯಾರಿಲ್ಲ. ಕ್ರೌರ್ಯವನ್ನು ಖಂಡಿಸಲೂ ಮನಸ್ಸು ಒಪ್ಪದು; ಆದರೂ ಸದಾ 'ಮಾನವತೆ'ಯ ಮಹಾಸಂದೇಶದ ಮಂತ್ರ ಬಾಯಲ್ಲಿ! ಇದು ಕಮ್ಯೂನಿಸ್ಟ್ ಎಡಬಿಡಂಗಿತನಕ್ಕೆ ಉದಾಹರಣೆ.

ಇತ್ತೀಚೆಗೆ ಕೇರಳದ ಕಲ್ಲಿಕೋಟೆಯಲ್ಲಿ ನಡೆದ ಸಮಾರಂಭವೊಂದರಲ್ಲಿ ಪ್ರಧಾನಿ ನರೇಂದ್ರಮೋದಿಯವರು ಈ ಕಮ್ಯೂನಿಸ್ಟ್ ಕ್ರೌರ್ಯಕ್ಕೆ ಬಲಿಯಾದ ಬಲಿದಾನಿಗಳ ಚಿತ್ರ ಸಹಿತ ವಿವರಗಳುಳ್ಳ 'ಆಹುತಿ' ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಿದ್ದಾರೆ. ಕಮ್ಯೂನಿಸ್ಟ್ ಪಕ್ಷ ನಡೆಸಿರುವ ಹಿಂಸಾಚಟುವಟಿಕೆಗಳ ಕುರಿತು ಸತ್ಯವನ್ನು ಹೊರತಂದು ಕಮ್ಯೂನಿಸ್ಟರ ಅಸಲಿ ಮುಖವಾಡವನ್ನು ಸಮಾಜಕ್ಕೆ ತೋರಿಸಬೇಕಾಗಿದೆ.



**ಎಬಿವಿಪಿಯ ಯುವ ಮುಂದಾಳು ವಿಶಾಲ್ ಕುಮಾರ್ ಎಂಬ ಯುವಕನನ್ನು 2012 ಜುಲೈ 17ರಂದು ಭೀಕರವಾಗಿ ಹತ್ಯೆ ಮಾಡಲಾಯಿತು. ಬಿ.ಎಸ್ಸಿ. ಇಲೆಕ್ಟ್ರಾನಿಕ್ಸ್ ವಿದ್ಯಾರ್ಥಿಯಾಗಿದ್ದ ಈ ಪ್ರತಿಭಾವಂತ ಯುವಕ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಚೆಂಗನ್ನೂರು ತಾಲೂಕು ಅಧ್ಯಕ್ಷ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ನಗರ ಶಾರೀರಿಕ ಪ್ರಮುಖನಾಗಿ ಜವಾಬ್ದಾರಿ ಹೊಂದಿದ್ದ. ವಿದ್ಯಾರ್ಥಿಗಳ ಪ್ರವೇಶೋತ್ಸವ ಕಾರ್ಯಕ್ರಮದಂದು ಕಾಲೇಜಿನ ಪ್ರವೇಶ ದ್ವಾರದಲ್ಲಿ ಸರಸ್ವತಿಯ ಚಿತ್ರದೊಂದಿಗೆ ವಿದ್ಯಾರ್ಥಿಗಳನ್ನು ಸ್ವಾಗತಿಸಿದ ಎಂಬ ಕಾರಣಕ್ಕೆ ಆತನ ಹತ್ಯೆ ಮಾಡಲಾಯಿತು.**

# ಪಿಎಚ್‌ಡಿ ಬಿಟ್ಟು ಕೃಷಿಗೆ ಒಗೊಟ್ಟು

ನೆಲದ ಮಾತು

ಪದವಿಯಲ್ಲಿ ಉತ್ತಮ ಅಂಕ, ವಿದೇಶದಲ್ಲಿ ಸ್ನಾತಕೋತ್ತರ ಪದವಿ, ಅಲ್ಲಿಯೇ ಉಪನ್ಯಾಸಕ ಹುದ್ದೆ, ವಿದ್ಯಾರ್ಥಿ ವೇತನದಲ್ಲಿಯೇ ಪಿಎಚ್‌ಡಿ ಮಾಡಲೂ ಆಹ್ವಾನ... ಆದರೆ ಇವೆಲ್ಲವನ್ನೂ ಬಿಟ್ಟು ಹುಟ್ಟೂರಲ್ಲೇ ಹೈನುಗಾರಿಕೆ ಮಾಡಿ ಮಾದರಿಯಾಗಿದ್ದಾರೆ ಗೌರಿಶಂಕರ ಕರೋಶಿ. ಅವರ ಹೈನುಗಾರಿಕೆಯ ಕಥೆಯನ್ನು ಅವರ ಮಾತುಗಳಲ್ಲೇ ಕೇಳಿ...

ನನಗೆ ಮೊದಲಿನಿಂದಲೂ ಕೃಷಿಯತ್ತ ಒಲವಿತ್ತು. ಪದವಿ ಮುಗಿಸಿ ಕೃಷಿ ಮಾಡೋಣ ಎಂದುಕೊಂಡೆ. ಪದವಿಯಲ್ಲಿ ಉತ್ತಮ ಅಂಕಗಳು ಬಂದವು. ಅಮೆರಿಕದಲ್ಲಿ ಸ್ನಾತಕೋತ್ತರ ಪದವಿ ಮಾಡಲು ಹೋದೆ. ಅಲ್ಲಿ ಉಪನ್ಯಾಸಕ ಹುದ್ದೆ ಸಿಕ್ಕಿತು, ವಿದ್ಯಾರ್ಥಿ ವೇತನವೂ ದಕ್ಕಿತು. ಅದರಲ್ಲಿಯೇ ಪಿಎಚ್.ಡಿ ಮಾಡಲೂ ಆಹ್ವಾನ ಬಂದಿತು. ಆದರೆ, ಅದೇ ಮಾರ್ಗದಲ್ಲಿಯೇ ಹೋದರೆ ನನ್ನ ಕನಸನ್ನು ನನಸು ಮಾಡಲಾಗುವುದಿಲ್ಲ ಎಂದು ಕೂಡಲೇ ನನ್ನ ಹುಟ್ಟೂರು ಧಾರವಾಡದ ಮನಗುಂಡಿಗೆ ವಾಪಸ್ ಬಂದೆ. ಹಾಲಿನ ಡೇರಿ ಮಾಡಿದೆ. ನನ್ನ ನಿರ್ಣಯಕ್ಕೆ ತಂದೆ–ತಾಯಿ ಬೇಸರ ಮಾಡಿಕೊಂಡರು. ಆದರೆ ನನ್ನ ಹಟ, ಬದ್ಧತೆ ನೋಡಿ ಕೈ ಜೋಡಿಸಿದರು.

ನಾನು ಘಟಕಕ್ಕಾಗಿ 100 ರೂ. ಖರ್ಚು ಮಾಡಿದರೆ, ಅದರಲ್ಲಿ 60ರಿಂದ 70 ರೂ. ಹಸುಗಳ ಆಹಾರಕ್ಕಾಗಿಯೇ ವಿನಿಯೋಗಿಸುತ್ತೇನೆ. ಇದರಿಂದ ಹಸುಗಳ ಆರೋಗ್ಯ ಸುಧಾರಿಸುತ್ತದೆ. ಉತ್ತಮ ಕರುಗಳನ್ನು ಹಾಕುವುದರಿಂದ ಸಹಜವಾಗಿಯೇ ಜಾನುವಾರುಗಳ ಸಂಖ್ಯೆ ಹೆಚ್ಚುತ್ತದೆ. ಲಾಭವೂ ಬರುತ್ತದೆ. ನಾನು 'ನಿಸರ್ಗ' ಹೆಸರಿನಲ್ಲಿ ಪ್ಯಾಕೆಟ್ ಮಾಡಿ ಹಾಲನ್ನು ಮಾರುತ್ತಿದ್ದೇನೆ. 'ಯೋಗಿ ಫಾರ್ಮ್ಸ್' ಉತ್ಪನ್ನದ ಹೆಸರಿನಲ್ಲಿ ಆಹಾರ ಇಲಾಖೆಯಲ್ಲಿ ನೋಂದಣಿ ಮಾಡಿಸಿದ್ದೇನೆ. 'ಮೂರು ಗಂಟೆ ವರ್ಸಸ್ ಮೂರು ದಿನ' ಎಂಬ ಪರಿಕಲ್ಪನೆಯೊಂದಿಗೆ ಇದು ಸಾಗಿದೆ. ಹಾಲು ಕರೆದು ಮೂರು ಗಂಟೆಗಳೊಳಗೆ ಗ್ರಾಹಕರ ಮನೆಗೆ ತಲುಪಿಸುವ ಕಾರ್ಯ ಮಾಡುತ್ತಿದ್ದೇವೆ. ಬೇರೆ ಕಂಪೆನಿಯ ಹಾಲು ಗ್ರಾಹಕರ ಮನೆ ತಲುಪುವುದಕ್ಕೆ ಮೂರು ದಿನ ಬೇಕಾಗುತ್ತದೆ.

ಹಸುಗಳ ಆಹಾರಕ್ಕಾಗಿ ಹುಲ್ಲು ಬೆಳೆಯುವ ವ್ಯವಸ್ಥೆ ಮಾಡಿಕೊಂಡಿದ್ದೇನೆ. ಎರಡೂವರೆ ಎಕರೆಯಲ್ಲಿ ವಿವಿಧ ಬಗೆಯ ಹುಲ್ಲು, ಕಾಳುಗಳನ್ನು ಸಂಪೂರ್ಣ ಸಾವಯವ ವಿಧಾನದಲ್ಲಿ



ಬೆಳೆಯುತ್ತಿದ್ದೇನೆ. ಗಿಡಗಳು ಹಾಳಾಗದಿರಲು ಸುತ್ತಲೂ ಬಫರ್ ಝೋನ್ ಸೃಷ್ಟಿಸಲಾಗಿದೆ. ಸೆಗಣಿ ಮತ್ತು ಮೂತ್ರ ಬಳಸಿಕೊಂಡು ಗೊಬ್ಬರ ತಯಾರಿಸಲಾಗುತ್ತಿದೆ. ಪ್ರಾರಂಭದಲ್ಲಿಯೇ ಲಾಭ ನಿರೀಕ್ಷೆ ಮಾಡಬಾರದು. ರೈತರ ಒಕ್ಕೂಟವೊಂದನ್ನು ರಚಿಸಿ, ಅವರಿಂದ ಉತ್ಪನ್ನ ಸಂಗ್ರಹಿಸಿ ಮಾರಾಟ ಮಾಡುವ ಕಂಪೆನಿ ನಿರ್ಮಿಸುವ ಉದ್ದೇಶ ಹೊಂದಿದ್ದೇನೆ. ರೈತನಿಂದ ನೇರವಾಗಿ ಗ್ರಾಹಕನಿಗೆ ಉತ್ಪನ್ನ ಮಾರಾಟ ಮಾಡುವುದು, ಆ ಲಾಭ ಪೂರ್ತಿ ರೈತನಿಗೆ ಸಿಗುವಂತೆ ಮಾಡಬೇಕು. ಆದರೆ, ಸಾವಯವ ಉತ್ಪನ್ನಗಳನ್ನು ಮಾತ್ರ.

# ವಾಟ್ಸಾಪ್ ಬ್ಯಾಕಪ್




ದಿನನಿತ್ಯ ಅತಿ ಹೆಚ್ಚು ಬಳಸುವ ಸ್ಮಾರ್ಟ್‌ಫೋನ್ ಆಪ್ ವಾಟ್ಸಾಪ್. ವಾಟ್ಸಾಪ್ ಅನ್ನು ಮೆಸೇಜ್ ಮೂಲಕ ಸಂವಹಿಸಲು, ವಿಡಿಯೋ, ಚಿತ್ರ, ಕಡತಗಳನ್ನು ಶೇರ್ ಮಾಡಲು, ಇಂಟರ್ನೆಟ್ ಕರೆ ಮಾಡಲು, ಸಹ ಬಳಸುತ್ತೇವೆ.

ಸುಲಭವಾಗಿ ವಾಟ್ಸಾಪ್ ಚಾಟ್ ಮತ್ತು ವಿಡಿಯೋಗಳನ್ನು ಆಂಡ್ರಾಯ್ಡ್‌ನಲ್ಲಿನ ಗೂಗಲ್ ಡ್ರೈವ್‌ಗೆ ಅಥವಾ ಐಕ್ಲೌಡ್ ಡ್ರೈವ್‌ಗೆ ಬ್ಯಾಕಪ್ ಮಾಡಿಕೊಳ್ಳಬಹುದು. ಅಥವಾ ಇತರೆ ಹೊಸ ಫೋನ್‌ಗೆ ವರ್ಗಾವಣೆ ಸಹ ಮಾಡಿಕೊಳ್ಳಬಹುದು.

ವಾಟ್ಸಪ್ ತೆರೆದು Menu > Settings > Chats > Chat backupಗೆ ಹೋಗಿ. ಅಲ್ಲಿ ನೀವು Backup to Google Drive ಎಂಬ ಆಯ್ಕೆಯನ್ನು ಪಡೆಯುತ್ತೀರಿ. ಅದನ್ನು ಆರಿಸಿದಾಗ ನಿಮ್ಮ ಗೂಗಲ್ ಖಾತೆಯನ್ನು ಲಿಂಕ್ ಮಾಡಲು ಅವಕಾಶ ನೀಡುತ್ತದೆ. ನಿಮ್ಮ ವಿವರಗಳನ್ನು ನೀಡಿ. ಯಾವುದೇ ಸಮಯದಲ್ಲಿ ಬ್ಯಾಕಪ್ ಪ್ರಾರಂಭವಾಗಬಹುದು. ಬ್ಯಾಕಪ್ ವೈಫೈ ಮೂಲಕ ಮಾತ್ರ ನಡೆಯುವಂತೆ ಮಾಡಲೂ ಅವಕಾಶವಿದೆ.

ಬ್ಯಾಕಪ್‌ನಿಂದ ಡಾಟಾ ರೀಸ್ಟೋರ್ ಮಾಡುವುದು ಹೇಗೆ? ಈ ಪ್ರಕ್ರಿಯೆ ಸುಲಭವಾದದ್ದು. ಹೊಸ ಫೋನ್‌ಗೆ ವಾಟ್ಸಾಪ್ ಇನ್‌ಸ್ಟಾಲ್ ಮಾಡಲು ಪ್ರಾರಂಭಿಸಿದಾಗ 'Restore your chats' ಎಂಬ ಆಯ್ಕೆ ಪಡೆಯುತ್ತೀರಿ. ಅದನ್ನು ಟ್ಯಾಪ್ ಮಾಡಿ. ರೀಸ್ಟೋರ್ ಆರಂಭವಾಗದಿದ್ದಲ್ಲಿ, ಇತರೆ ಮೊಬೈಲ್ ನಂಬರ್ ಅಥವಾ ಗೂಗಲ್ ಖಾತೆಯನ್ನು ನೀಡಬೇಕು. ಆಗ ನಿಮ್ಮ ಹೊಸ ಫೋನ್‌ನಲ್ಲಿ ಹಳೆಯ ಮೆಸೇಜ್ ಮತ್ತು ವಿಡಿಯೋ ಬ್ಯಾಕಪ್ ಪಡೆಯಬಹುದು.

***

**ನೀವು ಯಾವಾಗ ವಾಟ್ಸಾಪ್ ಬಳಸಿದಿರೆಂಬುದು ಇತರರಿಗೆ ತಿಳಿಯಬಾರದೇ? Settings > Chat Settings > Advanced ಆರಿಸಿರಿ ಮತ್ತು Last Seen Timestamp ಆಯ್ಕೆಯನ್ನು Off ಮಾಡಿ.**

***

**ಕಂಪ್ಯೂಟರಿನಲ್ಲಿ ವಾಟ್ಸಾಪ್ ಬಳಸಬೇಕೇ? Web.whatsapp.com ಓಪನ್ ಮಾಡಿ. ಈಗ ಮೊಬೈಲಿನಲ್ಲಿ ವಾಟ್ಸಾಪ್ ತೆರೆದು ಮೆನುವಿನಲ್ಲಿರುವ ವಾಟ್ಸಾಪ್ ವೆಬ್ ಆಯ್ಕೆಮೇಲೆ ಕ್ಲಿಕ್ ಮಾಡಿ. ಅಲ್ಲಿರುವ ಕ್ಯಾಮರಾವನ್ನು ನಿಮ್ಮ ಕಂಪ್ಯೂಟರಿನಲ್ಲಿ ಮೂಡಿರುವ QR ಕೋಡ್ ಮುಂದೆ ಹಿಡಿದರಾಯಿತು.**

# ಬಾಡಿಗೆ ಗೂಂಡಾಗಳಿಗೆ ಕುಖ್ಯಾತವಾಗಿದ್ದ ಗ್ರಾಮವೀಗ ಶಾಂತಿಯ ನೆಲೆವೀಡು

ತಾಮರಮ್ ಕೇರಳದ ಎರ್ನಾಕುಲಮ್ ಜಿಲ್ಲೆಯ ಕಾಲಡಿ ಸಮೀಪದ ಒಂದು ಪುಟ್ಟ ಹಳ್ಳಿ. ಕೆಲವು ವರ್ಷಗಳ ಹಿಂದೆ ಬಾಡಿಗೆ ಗೂಂಡಾಗಳು ಹಾಗೂ ಸುಪಾರಿ ಗ್ಯಾಂಗ್‌ಗಳಿಂದಾಗಿ ಈ ಹಳ್ಳಿ ಕುಖ್ಯಾತವಾಗಿತ್ತು. ಯಾರಿಗೋ ಹೊಡೆಯುವುದಿರಲಿ, ಇನ್ಯಾರದೋ ಮೂಳೆ ಮುರಿಯುವುದಿರಲಿ ಇಲ್ಲಿನ ಯುವಕರು ಬಾಡಿಗೆಗೆ ಸಿಗುತ್ತಿದ್ದರು. ಯಾರು ಹೆಚ್ಚು ಹಣ ನೀಡುತ್ತಾರೋ ಅವರ ಕೆಲಸ ಮಾಡುತ್ತಿದ್ದರು. ಸ್ಥಳೀಯ ರಾಜಕಾರಣಿಗಳನ್ನು ಇವರನ್ನು ಬಳಸಿಕೊಳ್ಳುತ್ತಿದ್ದರು. ಹೀಗಿದ್ದ ತಾಮರಮ್ ಇಂದು ಸಂಪೂರ್ಣ ಸುಸಂಸ್ಕೃತವಾಗಿ ಬದಲಾಗಿದೆ. ಈ ಪರಿವರ್ತನೆ ಸಾಧ್ಯವಾದದ್ದು 22ವರ್ಷಗಳ ಹಿಂದೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆ ಪ್ರಾರಂಭವಾಯಿತು. ಇಲ್ಲಿನ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿದ ಸಂಘ ಸಾಮಾಜಿಕ ಪರಿವರ್ತನೆ ತರುವ ಪ್ರಯತ್ನಕ್ಕೆ ಕೈಹಾಕಿತು. ಪರಿವರ್ತನೆ ಸುಮ್ಮನೆ ಬರಲಿಲ್ಲ, ಎಂಟು ಜನ ಸ್ವಯಂಸೇವಕರು ಕಮ್ಯುನಿಸ್ಟರ ಜೊತೆಗಿನ ಸಂಘರ್ಷದಲ್ಲಿ ಪ್ರಾಣಾರ್ಪಣೆ ಮಾಡಿದರು. ಹಾಗೆಯೇ ಅನೇಕ ಜನ ಕಮ್ಯುನಿಸ್ಟ ಪಂಗಡವನ್ನು ತೊರೆದು ಸಂಘದ ಶಾಖೆ ಸೇರಿದರು.

ಸುಮಾರು 600 ಕುಟುಂಬಗಳಿರುವ ಈ ಗ್ರಾಮದಲ್ಲಿ ಇಂದು ಐದರಿಂದ ಅರವತ್ತೈದು ವಯಸ್ಸಿನವರೆಗಿನ 75ಕ್ಕೂ ಹೆಚ್ಚು ಕಾರ್ಯಕರ್ತರಿದ್ದಾರೆ, 200ಕ್ಕೂ ಮಿಕ್ಕಿ ಸ್ವಯಂಸೇವಕರಿದ್ದಾರೆ. ಇವರಲ್ಲಿ 80 ಪ್ರತಿಶತ ಆರ್ಥಿಕ ದುರ್ಬಲ ವರ್ಗದವರಾಗಿದ್ದಾರೆ. ಮಹಿಳೆಯರ ಸಶಕ್ತೀಕರಣಕ್ಕಾಗಿ ಅಕ್ಷಯಶ್ರೀ ಎಂಬ ಹೆಸರಿನ ಸ್ವಸಹಾಯ ಸಂಘವೂ ಈ ಊರಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಂಪಾದಕೀಯ ಸಹಕಾರ ರಾಜೇಶ್ ಪದ್ಮಾರ್, ಶೈಲೇಶ್ ಕುಲಕರ್ಣಿ, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಸತ್ಯನಾರಾಯಣ ಶಾನುಬೋಗ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್



ಕರ್ನಾಟಕ ಶಾಸ್ತ್ರೀಯ ಸಂಗೀತಗಾರ್ತಿ ಎಂ.ಎಸ್. ಸುಬ್ಬುಲಕ್ಷ್ಮಿ (16 ಸೆ. 1916 – 11 ಡಿ. 2004) ಅವರ ಜನ್ಮಶತಮಾನೋತ್ಸವ ವರ್ಷವಿದು. ಈ ಗೌರವಾರ್ಥ ವಿಶ್ವಸಂಸ್ಥೆ ಅಂಚೆ ಚೀಟಿಯೊಂದನ್ನು ಬಿಡುಗಡೆ ಮಾಡಿದೆ. ಈ ಅಂಚೆ ಚೀಟಿಯಲ್ಲಿ ವಿಶ್ವಸಂಸ್ಥೆಯ ನೀಲಿ ಲಾಂಛನ ಹಾಗೂ ಸುಬ್ಬುಲಕ್ಷ್ಮಿ ಅವರ ಭಾವಚಿತ್ರ ಇದೆ.



**ನೇತಾಜಿ ಸುಭಾಷ್ ಚಂದ್ರ ಬೋಸ್ ಅವರಿಗೆ ಸಂಬಂಧಿಸಿದ 25 ವರ್ಗೀಕೃತ ಕಡತಗಳ ಎಂಟನೇ ಕಂತನ್ನು ಕೇಂದ್ರ ಸರ್ಕಾರ ಸಾರ್ವಜನಿಕ ವೀಕ್ಷಣೆಗಾಗಿ ಬಿಡುಗಡೆ ಮಾಡಲಾಗಿದ್ದು, ಆನ್‌ಲೈನ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲಾಯಿತು. ಈ 25 ಕಡತಗಳು 1951ರಿಂದ 2006ರ ಅವಧಿಯ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಸಂಬಂಧಪಟ್ಟ ಕಡತಗಳಾಗಿವೆ. ನೇತಾಜಿ ಅವರಿಗೆ ಸಂಬಂಧಿಸಿದ 100 ಕಡತಗಳ ಮೊದಲ ಕಂತನ್ನು 2016ರ ಜನವರಿ 23ರಂದು ಪ್ರಧಾನಿ ನರೇಂದ್ರ ಮೋದಿ ಅವರು ನೇತಾಜಿ ಅವರ 119ನೇ ಜನ್ಮದಿನದ ಸಂದರ್ಭದಲ್ಲಿ ಬಿಡುಗಡೆ ಮಾಡಿದ್ದರು. ಆ ಬಳಿಕ 2016ರ ಮಾರ್ಚ್‌ನಿಂದ ಆಗಸ್ಟ್‌ವರೆಗಿನ ಅವಧಿಯಲ್ಲಿ 6 ಕಂತುಗಳಲ್ಲಿ 175 ಕಡತಗಳನ್ನು ಬಿಡುಗಡೆ ಮಾಡಲಾಗಿತ್ತು. ಒಟ್ಟಾರೆ 275 ಕಡತಗಳ ಪೈಕಿ ಪ್ರಧಾನ ಮಂತ್ರಿಯವರ ಕಚೇರಿ (58 ಕಡತಗಳು), ಗೃಹ ವ್ಯವಹಾರಗಳ ಸಚಿವಾಲಯ (37 ಕಡತಗಳು), ವಿದೇಶಾಂಗ ವ್ಯವಹಾರಗಳ ಸಚಿವಾಲಯ (171 ಕಡತಗಳು), ಮತ್ತು ಸಂಪುಟ ಸಚಿವಾಲಯದ (9 ಕಡತಗಳು) ಕಡತಗಳು ಸೇರಿವೆ.**



ಇತ್ತೀಚೆಗೆ ಪಾಕ್ ಆಕ್ರಮಿಕ ಕಾಶ್ಮೀರದ ಉಗ್ರ ನೆಲೆಗಳ ಮೇಲೆ ಸರ್ಜಿಕಲ್ ಸ್ಟ್ರೈಕ್ ನಡೆಸಿ ಉಧ್ವಸ್ತಗೊಳಿಸಿದ ಸೈನಿಕ ಕಾರ್ಯಾಚರಣೆಯಲ್ಲಿ ಇಸ್ರೋ ನಿರ್ಮಿತ ಉಪಗ್ರಹಗಳು ಸಹಾಕಾರಿಗಳಾಗಿವೆ. 2005 ರಿಂದ 2016 ಜನವರಿ 22ರ ವರೆಗೆ ಇಸ್ರೋ ಕಕ್ಷೆಗೆ ಸೇರಿಸಿರುವ ಭೂ ವೀಕ್ಷಣಾ ಉಪಗ್ರಹ (Earth observation satellite)ಗಳೆಂದು ಕರೆಯುವ ಕಾರ್ಟೋಸ್ಯಾಟ್ ಸರಣಿಯ ಐದು ಉಪಗ್ರಹಗಳು ಉಗ್ರ ನೆಲೆಗಳನ್ನು ನಿಖರವಾಗಿ ಗುರುತಿಸುವಲ್ಲಿ ಸಹಕರಿಸಿದವು. ಪ್ರತಿ 90 ನಿಮಿಷಕ್ಕೆ ಭೂಮಿಯನ್ನು ಒಂದು ಪ್ರದಕ್ಷಿಣೆ ಹಾಕುವ ಈ ಲೋಹದ ಹಕ್ಕಿಗಳು 567 ಕಿ.ಮೀ. ಎತ್ತರದ ಕಕ್ಷೆಯಲ್ಲಿದ್ದರೂ ಭೂಮಿಯ ಮೇಲೆ 0.65 ಮೀ. ರೆಸೊಲ್ಯುಶನ್ನಿನ ಚಿತ್ರಗಳನ್ನು ತೆಗೆಯಬಲ್ಲವು. ಅಂದರೆ ಪಾಕಿಸ್ತಾನಿ ಪ್ರಧಾನಿ ಮನೆಯ ಮುಂದಿರುವ ಕಾರುಗಳನ್ನೂ ಸೆರೆಹಿಡಿಯಬಲ್ಲವು. ಅಲ್ಲದೇ ಪ್ರತಿ ಸೆಕೆಂಡಿಗೆ 37 ಕಿ.ಮೀ. ಯಷ್ಟು ಅತಿ ವೇಗದಲ್ಲಿ ಚಲಿಸುತ್ತಿದ್ದರೂ ಒಂದು ನಿಮಿಷದ ವೀಡಿಯೋ ಸೆರೆಹಿಡಿಯಬಲ್ಲವು. ನಾವು ಗಮನಿಸಬೇಕಾದಂತೆ ಬೇಹುಗಾರಿಕೆ, ಸಂವಹನಗಳ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ಭಾರತವು C4ISR (command, control, communications, computers, intelligence, surveillance, and reconnaissance) ಎನ್ನುವ ಸುರಕ್ಷಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತಿದೆ.

**ವಾಯು ಮಾಲಿನ್ಯದಿಂದಾಗಿ ಬಲಿಯಾಗುತ್ತಿರುವವರ ಸಂಖ್ಯೆಯಲ್ಲಿ ಭಾರತ ಜಗತ್ತಿನಲ್ಲಿಯೇ 2ನೇ ಸ್ಥಾನದಲ್ಲಿದ್ದು, ಸಾವಿನ ಸಂಖ್ಯೆ ವರ್ಷಕ್ಕೆ 6.20 ಲಕ್ಷ ಎಂದು ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯುಎಚ್‌ಒ) ಬಿಡುಗಡೆ ಮಾಡಿರುವ ವರದಿ ತಿಳಿಸಿದೆ. ತೀವ್ರ ವಾಯುಮಾಲಿನ್ಯದಿಂದ ಭಾರತದಲ್ಲಿ ಸಾವು ನೋವಿನ ಸಂಖ್ಯೆ ಹೆಚ್ಚುತ್ತಿದೆ. ಪ್ರಮುಖವಾಗಿ ಹೃದಯ ಸಂಬಂಧಿ ಕಾಯಿಲೆಗಳು, ತೀವ್ರ ಉಸಿರಾಟದ ಸಮಸ್ಯೆ, ಪಾರ್ಶ್ವವಾಯು, ಶ್ವಾಸನಾಳದ ಸೋಂಕು ಮತ್ತು ಶ್ವಾಸಕೋಶದ ಕ್ಯಾನ್ಸರ್ ಹೆಚ್ಚುತ್ತಿವೆ. ಪ್ರಸ್ತುತ ಸಂಭವಿಸುತ್ತಿರುವ ಸಾವುಗಳಲ್ಲಿ ಶೇ 94ರಷ್ಟು ಅಕಾಲಿಕ. ಅದಕ್ಕೆ ವಾಯು ಮಾಲಿನ್ಯವೇ ಪ್ರಮುಖ ಕಾರಣ. ಮಲಿನಗೊಂಡಿರುವ ಗಾಳಿಯಿಂದಾಗಿ ಐದು ವರ್ಷದೊಳಗಿನ ಮಕ್ಕಳು ಉಸಿರಾಟಕ್ಕೆ ಸಂಬಂಧಿಸಿದ ಸೋಂಕಿನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ಡಬ್ಲ್ಯುಎಚ್‌ಒ ತಿಳಿಸಿದೆ. ಚೀನಾದಲ್ಲಿ ಅತಿ ಹೆಚ್ಚು ಜನ ಅಂದರೆ ವರ್ಷಕ್ಕೆ 10.32 ಲಕ್ಷ ಜನ ಬಲಿಯಾಗುತ್ತಿದ್ದಾರೆ.**






**ಗಂಗಾಜಲದ ಬಗ್ಗೆ ಭಾರತೀಯರಿಗಿರುವ ಪವಿತ್ರ ಭಾವನೆಯ ಹಿಂದೆ ವೈಜ್ಞಾನಿಕ ಕಾರಣಗಳಿವೆಯೇ? ಈ ನೀರಿನಲ್ಲಿ ವಿಶೇಷವಾದ ಅಂಶವಿದೆಯೇ ಎಂಬ ಬಗ್ಗೆ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ ಅಧೀನದಲ್ಲಿರುವ ನಾಗಪುರ ಮೂಲದ ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆ(ನೀರಿ)ಯ ವಿಜ್ಞಾನಿಗಳು ಅಧ್ಯಯನಕ್ಕೆ ಮುಂದಾಗಿದ್ದಾರೆ. ಗಂಗೆಯ ಜತೆಗೆ ಯಮುನಾ ಮತ್ತು ನರ್ಮದಾ ನದಿಯ ನೀರನ್ನು ಹೋಲಿಕೆ ಮಾಡಿ ನೋಡಲಿದ್ದಾರೆ. ಈ ನದಿಗಳು ಹರಿಯುವ 10–15 ಸ್ಥಳಗಳಲ್ಲಿ ನೀರಿನ ಮಾದರಿಯನ್ನು ಸಂಗ್ರಹಿಸಿ, ವಿಶ್ಲೇಷಿಸಲಾಗುತ್ತದೆ. ಕಳೆದ ಒಂದೂವರೆ ವರ್ಷದಲ್ಲಿ ಗಂಗಾ ನದಿಯ 35 ಸ್ಥಳಗಳಲ್ಲಿ ಮಾದರಿ ಸಂಗ್ರಹಿಸಲಾಗಿದೆ. ಡಿಸೆಂಬರ್ ಒಳಗೆ ಅಧ್ಯಯನದ ವರದಿಯನ್ನು ಜಲಸಂಪನ್ಮೂಲ ಸಚಿವಾಲಯಕ್ಕೆ ಸಲ್ಲಿಸಲಾಗುವುದು ಎಂದು ನೀರಿ ನಿರ್ದೇಶಕರು ತಿಳಿಸಿದ್ದಾರೆ.**



**ಸೆಪ್ಟೆಂಬರ್ 18 ರಂದು ಜಮ್ಮು ಕಾಶ್ಮೀರದ ಉರಿಯಲ್ಲಿ ನಡೆದ ಉಗ್ರದಾಳಿಯಲ್ಲಿ ಹುತಾತ್ಮರಾದ ಸೈನಿಕರ ಮಕ್ಕಳ ಶಾಲಾ ಹಾಗೂ ಕಾಲೇಜು ವ್ಯಾಸಂಗದ ಸಂಪೂರ್ಣ ಖರ್ಚನ್ನು ಭರಿಸುವುದಾಗಿ ಗುಜರಾತಿನ ಸೂರತ್ ಮೂಲದ ಉದ್ಯಮಿ ಮಹೇಶ್ ಸವಾನಿ ತಿಳಿಸಿದ್ದಾರೆ.**

## ಸಾಲುದ್ದದ ಸುದ್ದಿಗಳು



**ಮಂಗಳೂರು, ಉಡುಪಿ ಹಾಗೂ ಮೈಸೂರು ಸೇರಿದಂತೆ ದೇಶದ 20 ಸ್ಥಳೀಯ ನಗರ ಸಂಸ್ಥೆಗಳನ್ನು 'ಬಯಲು ಶೌಚ ಮುಕ್ತ ನಗರ' ಎಂದು ಸ್ವಚ್ಛ ಭಾರತ ಅಭಿಯಾನದ ಮಾಪನ ಸಂಸ್ಥೆ ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ ಪ್ರಮಾಣಪತ್ರ ವಿತರಿಸಿದೆ. ಇನ್ನುಳಿದಂತೆ ತೆಲಂಗಾಣ, ಆಂಧ್ರಪ್ರದೇಶ, ಗುಜರಾತ್ ಮುಂತಾದ ರಾಜ್ಯಗಳ ನಗರಗಳು ಪಟ್ಟಿಯಲ್ಲಿ ಸ್ಥಾನ ಪಡೆದಿವೆ.**



**ಹನ್ನೆರಡರ ಬಾಲಕ ಬಿಪಿನ್ ಗಣಾತ್ರನ ಅಣ್ಣ ಅಗ್ನಿ ಅವಘಡಕ್ಕೆ ತುತ್ತಾಗಿ ಅಕಾಲದಲ್ಲೇ ವಿಧಿವಶನಾದ. ಅವತ್ತೇ ತನ್ನ ಅಣ್ಣನಿಗಾದ ನೋವು ಇನ್ಯಾರಿಗೂ ಆಗದಿರಲಿ ಇದಕ್ಕಾಗಿ ತನ್ನ ಕೈಲಾದ ಸಹಾಯ ಮಾಡುವೆ ಎಂಬ ನಿರ್ಧಾರ ಆ ಬಾಲಕನಲ್ಲಿ ಮೂಡಿತು. ಆ ನಿರ್ಧಾರದ ಪರಿಣಾಮವಾಗಿಯೇ 4 ದಶಕಗಳ ನಂತರ ಕೊಲ್ಕತಾದಲ್ಲಿ ಇಂದು ಬಿಪಿನ್ ತಮ್ಮ 59ನೆ ವಯಸ್ಸಿನಲ್ಲಿಯೂ ಅಗ್ನಿ ಅವಘಡಗಳ ಸುದ್ದಿ ಗೊತ್ತಾಗಿದ್ದೇ ತಡ ಜನರ ಪ್ರಾಣ ಉಳಿಸಲು ಧಾವಿಸುತ್ತಾರೆ. ವೃತ್ತಿನಿರತ ಅಗ್ನಿಶಾಮಕ ಪೇದೆಯಲ್ಲದಿದ್ದರೂ ತಮ್ಮ ಅನುಭವ, ಜಾಣ್ಮೆ ಹಾಗೂ ಪರೋಪಕಾರದ ತೀವ್ರ ತುಡಿತಗಳಿಂದಲೇ ಬಿಪಿನ್ 100ಕ್ಕೂ ಮೀರಿ ಅಗ್ನಿ ಅವಘಡಗಳಲ್ಲಿ ತಮ್ಮ ಪ್ರಾಣಪಣಕ್ಕಿಟ್ಟು ಜನರ ಬದುಕನ್ನು ಉಳಿಸಿದ್ದಾರೆ.**

ಅಡವಿ ಸೋಮಾಪುರ ಗದಗ ಜಿಲ್ಲಾ ಕೇಂದ್ರದಿಂದ ಹದಿನೈದು ಕಿ.ಮೀ. ದೂರದಲ್ಲಿರುವ ಒಂದು ತಾಂಡಾ. ಸುಮಾರು 250 ಮನೆಗಳಿರುವ ಈ ಊರಿನಲ್ಲಿ 600 ಜನರಿದ್ದಾರೆ. ಬರಡು ನೆಲದ ಈ ಊರಿನಲ್ಲಿ ಕುಡಿಯಲು ನೀರೇ ಇರಲಿಲ್ಲ. ನೀರಿಗಾಗಿ ಕಿ.ಮೀ. ಗಟ್ಟಲೆ ನಡೆದು ಹೋಗಬೇಕಾಗಿತ್ತು. ಬಿರುಬೇಸಿಗೆಯಲ್ಲಂತೂ ಇಲ್ಲಿ ನೀರಿಗಾಗಿ ಅಕ್ಷರಶಃ ಹಾಹಾಕಾರ. ಸಮಸ್ಯೆ ಕುಡಿಯುವ ನೀರಿನದ್ದಷ್ಟೇ ಆಗಿರಲಿಲ್ಲ, ದಿನಬಳಕೆಗೂ ಆ ಊರಿನಲ್ಲಿ ನೀರಿರಲಿಲ್ಲ. ಇಂತಹ ಸಮಯದಲ್ಲಿ ಗ್ರಾಮ ಪಂಚಾಯಿತಿಯ ಸಹಕಾರದೊಂದಿಗೆ ಮಳೆ ನೀರು ಸಂಗ್ರಹಕ್ಕಾಗಿ ಊರಿನ ಶಾಲೆಯನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಶಾಲೆಯ ಚಾವಣಿ ಮೇಲೆ ಬೀಳುವ ಮಳೆ ನೀರು ಸಂಗ್ರಹಿಸಿ ಒಂದು ಬಾರಿಗೆ ಐವತ್ತು ಸಾವಿರ ಲೀಟರ್‌ಗಳಷ್ಟು ನೀರು ಸಂಗ್ರಹಿಸಲಾಯಿತು. ಶಾಲೆಯ ಚಾವಣಿಗಳಿಗೆ ಕೊಳವೆ, ಹರಿದು ಬರುವ ನೀರಿಗೆ ಫಿಲ್ಟರ್, ನೀರು ಸಂಗ್ರಹಣಾ ತೊಟ್ಟಿಯ ಒಳಭಾಗದ ಶುದ್ಧೀಕರಣ, ನೀರು ಮೇಲೆತ್ತುವ ಪಂಪ್ ಹೀಗೆ ಎಲ್ಲವೂ ಸಿದ್ಧ ಮಾಡಿಕೊಂಡು ನಿರ್ಮಾಣ ಕಾರ್ಯ ಆರಂಭಿಸಲಾಯಿತು. ಕೆಲವೇ ದಿನಗಳಲ್ಲಿ ಊರಿನಲ್ಲಿ ಮಳೆ ನೀರು ಸಂಗ್ರಹಿಸಿ ನೀರು ಶುದ್ಧೀಕರಣ ಮಾಡುವ ಘಟಕ ನಿರ್ಮಾಣವಾಗೇ ಬಿಟ್ಟಿತು. ಈಗ ಊರಿನ ಪ್ರತೀ ಜನರಿಗೂ ಶುದ್ಧ ಕುಡಿಯುವ ನೀರು ಲಭ್ಯವಾಗುತ್ತಿದೆ.

**ಅಂತರಿಕ್ಷದಲ್ಲಿ ಈಗಾಗಲೇ ಅನೇಕ ವಿಕ್ರಮಗಳನ್ನು ಸಾಧಿಸಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಒಂದು ಉಡಾವಣೆಯಲ್ಲಿ ಎರಡು ಬೇರೆ ಬೇರೆ ಕಕ್ಷೆಗಳಲ್ಲಿ ಉಪಗ್ರಹಗಳನ್ನು ಸ್ಥಾಪಿಸುವ ಮೂಲಕ ತನ್ನ ಕಿರೀಟಕ್ಕೆ ಇನ್ನೊಂದು ಗರಿಯನ್ನು ಏರಿಸಿದೆ. ಆಂಧ್ರಪ್ರದೇಶದ ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಸ್ಪೇಸ್ ಸೆಂಟರ್ ಉಡಾವಣಾ ಕೇಂದ್ರದಿಂದ ಉಡಾವಣೆಗೊಂಡ ಪಿಎಸ್‌ಎಲ್‌ವಿ–ಸಿ35 730 ಕಿ.ಮೀ. ಕಕ್ಷೆಗೆ ಹವಾಮಾನ ಮುನ್ಸೂಚನೆ ನೀಡುವ ಸ್ಕ್ಯಾಟ್‌ಸ್ಯಾಟ್–1 ಉಪಗ್ರಹವನ್ನು ಸೇರಿಸಿತು. ನಂತರ 689 ಕಿ.ಮೀ.ಯ ಇನ್ನೊಂದು ಕಕ್ಷೆಗೆ ವಿದೇಶಿ ನಿರ್ಮಿತ ಉಪಗ್ರಹಗಳು, ಐಐಟಿ ಬಾಂಬೆ ಹಾಗೂ ಬೆಂಗಳೂರಿನ ಪಿಇಎಸ್ ಕಾಲೇಜಿನ ವಿದ್ಯಾರ್ಥಿಗಳು ನಿರ್ಮಿಸಿದ ಉಪಗ್ರಹಗಳು ಸೇರಿದಂತೆ ಏಳು ಉಪಗ್ರಹಗಳನ್ನು ಸೇರಿಸಿತು. ಇದು ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್(ಪಿಎಸ್‌ಎಲ್‌ವಿ)ಯ 37ನೇ ಯಶಸ್ವೀ ಉಡಾವಣೆಯಾಗಿದೆ.**

## ಮಹಾರಾಷ್ಟ್ರದಲ್ಲಿ ಒಂದು ಕೋಟಿ 'ವೃಕ್ಷ ರಾಯಭಾರಿ'ಗಳು!



ಪರಿಸರ ಸಂರಕ್ಷಣೆಗೆ ದಿಟ್ಟ ಹೆಜ್ಜೆಯಿಟ್ಟಿರುವ ಮಹಾರಾಷ್ಟ್ರ ಸರ್ಕಾರ 50 ಕೋಟಿ ಗಿಡ ನೆಡುವ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ರೂಪಿಸಿದೆ. ಈ ಗುರಿ ಸಾಧನೆಗಾಗಿ ರಾಜ್ಯದಾದ್ಯಂತ ಒಂದು ಕೋಟಿ 'ವೃಕ್ಷ ರಾಯಭಾರಿ'ಗಳನ್ನು (ವೃಕ್ಷ ದೂತರು) ನೇಮಿಸಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ. ಈ ಪ್ರತಿಯೊಬ್ಬ ರಾಯಭಾರಿ ಪ್ರತಿವರ್ಷ ಒಂದು ಗಿಡ ನೆಡಬೇಕು ಮತ್ತು ಆ ಗಿಡಗಳನ್ನು ವೃಕ್ಷಮಿತ್ರರಂತೆ ರಕ್ಷಣೆ ಮಾಡಬೇಕು.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-10-2016



## ಆರ್ಥಿಕವಾಗಿ ಹಿಂದುಳಿದವರಿಗೆ ರಾಷ್ಟ್ರೋತ್ಥಾನದಿಂದ ಉಚಿತ ಪಿಯು, ಐಟಿಐ ಶಿಕ್ಷಣ: ಅರ್ಜಿ ಸಲ್ಲಿಸಿ

ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮುನ್ನಲೆಗೆ ತರುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್ 'ತಪಸ್' ಎಂಬ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯಡಿ ಉಚಿತ ಶಿಕ್ಷಣ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದಿರುವ 30–40 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅವರಿಗೆ ಉಚಿತವಾಗಿ ಪಿಯುಸಿ ಶಿಕ್ಷಣ ಮತ್ತು ಐ.ಐ.ಟಿ. ಪ್ರವೇಶ ನೀಡುತ್ತದೆ. ಅಲ್ಲದೇ ಉಚಿತ ಊಟ ಮತ್ತು ವಸತಿಯನ್ನು ವಿದ್ಯಾರ್ಥಿ ನಿಲಯದಲ್ಲಿ ಕಲ್ಪಿಸುತ್ತದೆ.

**ಉಚಿತ ವಿದ್ಯಾರ್ಥಿ ನಿಲಯ:** ಕ್ಷೇಮಕರ, ಸ್ವಚ್ಛ ಮತ್ತು ಆರೋಗ್ಯದಾಯಕ ಸಸ್ಯಾಹಾರಿ ಆಹಾರವನ್ನು ಉಚಿತವಾಗಿ ಒದಗಿಸಲಾಗುತ್ತದೆ.

**ಸೌಕರ್ಯ:** ತರಗತಿಗಳು, ಪ್ರಯೋಗಾಲಯಗಳು ಮತ್ತು ಸುಸಜ್ಜಿತ ಗ್ರಂಥಾಲಯ ಉತ್ತಮವಾಗಿ ವಿನ್ಯಾಸಗೊಂಡಿದೆ ಮತ್ತು ಕಠಿಣ ಪರಿಶ್ರಮದಿಂದ ಶ್ರೇಷ್ಠರೆನಿಸಲು ಸ್ಫೂರ್ತಿ ನೀಡುವಂತಿದೆ.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೆಂಗಳೂರಿನಲ್ಲಿರುವ ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜಿನಲ್ಲಿ ಪ್ರವೇಶ ಒದಗಿಸಲಾಗುವುದು. ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜಿನ ಮತ್ತು ಬೇಸ್‌ನ ನುರಿತ ಉಪನ್ಯಾಸಕರುಗಳು ತರಬೇತಿ ನೀಡುತ್ತಾರೆ.

### ಅರ್ಹತೆಗಳು

- ಪ್ರಸ್ತುತ ಸಾಲಿನಲ್ಲಿ SSLC/10ನೇ ತರಗತಿಯ ಪರೀಕ್ಷೆ ಬರೆಯುವವರಾಗಿರಬೇಕು.
- 9ನೇ ತರಗತಿ ಅಂತಿಮ ಪರೀಕ್ಷೆಗಳಲ್ಲಿ ಕನಿಷ್ಠ 80% ಅಂಕಗಳನ್ನು ಪಡೆದಿರಬೇಕು.
- ಪೋಷಕರ ವಾರ್ಷಿಕ ವರಮಾನ ರೂ. 1,50,000 (ಒಂದು ಲಕ್ಷ ಐವತ್ತು ಸಾವಿರ) ಮೀರಿರಬಾರದು.
- ಆಯ್ಕೆಯಾದರೆ ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ಬೆಂಗಳೂರಿಗೆ ತೆರಳಲು ಸಿದ್ಧರಿರಬೇಕು.
- 'ತಪಸ್' ಪ್ರಕಲ್ಪ ಬಾಲಕ ವಿದ್ಯಾರ್ಥಿಗಳಿಗೆ ಮಾತ್ರ

### ಆಯ್ಕೆ ವಿಧಾನ

- ಆಯ್ಕೆಯನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಮಾಡಲಾಗುವುದು
- ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ಕೆಲವು ನಗರಗಳಲ್ಲಿ ಏಕಕಾಲದಲ್ಲಿ ಲಿಖಿತ ಪರೀಕ್ಷೆ ನಡೆಸಲಾಗುವುದು
- **ಪರೀಕ್ಷಾ ದಿನಾಂಕ: 25 ಡಿಸೆಂಬರ್**
- ಆಯ್ಕೆ ಪರೀಕ್ಷೆಗೆ ಯಾವುದೇ ಶುಲ್ಕವಿರುವುದಿಲ್ಲ
- ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದವರಿಗೆ ಮೌಖಿಕ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ನೀಡಲಾಗುವುದು

### ಅರ್ಜಿ ಸಲ್ಲಿಕೆ ಹೇಗೆ

- ವಿದ್ಯಾರ್ಥಿಗಳು ಓದುತ್ತಿರುವ ಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿಯನ್ನು ತಪಸ್‌ನ ಅಂತರ್ಜಾಲ ತಾಣ www.tapasedu.org ಗೆ ಭೇಟಿ ಕೊಟ್ಟು ಡೌನ್‌ಲೋಡ್ ಮಾಡಿಕೊಂಡು ಅವಶ್ಯಕ ವಿವರಗಳನ್ನು ಭರ್ತಿ ಮಾಡಿ ಮುಖ್ಯೋಪಾಧ್ಯಯರ ಸಹಿ ಪಡೆದು ತಪಸ್ ಪ್ರಕಲ್ಪಕ್ಕೆ ಕಳುಹಿಸುವುದು.
- ಅರ್ಜಿ ಸಲ್ಲಿಸಲು **ಕೊನೆಯ ದಿನಾಂಕ: ನವೆಂಬರ್ 30** (ಹೆಚ್ಚಿನ ಮಾಹಿತಿಗಳಿಗಾಗಿ ನಮ್ಮ ಅಂತರ್ಜಾಲವನ್ನು ನೋಡುವುದು.)

**ಅರ್ಜಿ ಸಲ್ಲಿಸಬೇಕಾದ ವಿಳಾಸ:**

ಸಂಯೋಜಕರು, **'ತಪಸ್'** ಪ್ರಕಲ್ಪ
ರಾಷ್ಟ್ರೋತ್ಥಾನ ಪರಿಷತ್, ಕೇಶವಶಿಲ್ಪ ಕೆಂಪೇಗೌಡನಗರ,
ಬೆಂಗಳೂರು–560 019
ದೂರವಾಣಿ: 080–26612652, 94812 01144

ಪರೀಕ್ಷಾ ಕೇಂದ್ರಗಳ ಮಾಹಿತಿಯನ್ನು ಡಿಸೆಂಬರ್ ಮೊದಲ ವಾರದಲ್ಲಿ ವೆಬ್‌ಸೈಟ್ www.tapasedu.orgನಲ್ಲಿ ಪ್ರಕಟಿಸಲಾಗುವುದು.

## ಲೋಕನಾಯಕ ಜಯಪ್ರಕಾಶ ನಾರಾಯಣರ ವಿಚಾರ ದರ್ಶನ



1975ರಲ್ಲಿ ಇಂದಿರಾ ಗಾಂಧಿಯವರ ಸರ್ಕಾರ ಭಾರತದ ಮೇಲೆ 'ತುರ್ತುಪರಿಸ್ಥಿತಿ' ಎಂಬ ಸಾಂವಿಧಾನಿಕ ಅನಾಹುತದ ಬರೆ ಎಳೆದಾಗ ಅದರಿಂದ ಮುಕ್ತಿ ಪಡೆಯಲು ಸಮಾಜದ ಎಲ್ಲ ವರ್ಗಗಳ ಜನರನ್ನು ಮುನ್ನಡೆಸಿದ ಧೀಮಂತ ವ್ಯಕ್ತಿತ್ವ ಜಯಪ್ರಕಾಶ ನಾರಾಯಣ್. ಜಯಪ್ರಕಾಶರು ಹಿರಿಯ ಸ್ವಾತಂತ್ರ ಸೇನಾನಿ ಮತ್ತು ಚಿಂತಕರೂ ಹೌದು. ಅವರ ಒಟ್ಟಾರೆ ಚಿಂತನೆ 'ಸಂಪೂರ್ಣ ಕ್ರಾಂತಿ' ಎಂದೇ ಹೆಸರುವಾಸಿಯಾಗಿದೆ.

ಜನಮಾನಸದಲ್ಲಿ ಲೋಕನಾಯಕರೆಂದೇ ಪ್ರಸಿದ್ಧರಾಗಿದ್ದ ಅವರ ಚಿಂತನೆಯ ಚಿಂತನೆಗಳಂತೆ 'ಸಂಪೂರ್ಣ ಕ್ರಾಂತಿ' ಎಂದರೆ:

- ಭ್ರಷ್ಟಾಚಾರ, ನಿರುದ್ಯೋಗ, ಶೈಕ್ಷಣಿಕ ಹಿಂದುಳಿಯುವಿಕೆ ಇವೆಲ್ಲವನ್ನೂ ಪ್ರಸಕ್ತ ವ್ಯವಸ್ಥೆಯಿಂದ ಸುಧಾರಿಸುವುದು ಸಾಧ್ಯವಿಲ್ಲ. ಅದಕ್ಕೆ ಕಾರಣವೆಂದರೆ ಈ ಎಲ್ಲ ಸಾಮಾಜಿಕ ಸವಾಲುಗಳೂ ಪ್ರಸಕ್ತ ವ್ಯವಸ್ಥೆಯಿಂದಲೇ ಹುಟ್ಟಿದ್ದು. ಹೀಗಾಗಿ ಸಮಾಜದ ಕುರೀತಿಗಳ ಮೂಲೋತ್ಪಾಟನೆಗೆ ಸಂಪೂರ್ಣ ಕ್ರಾಂತಿ ಆವಶ್ಯಕವಾಗಿದೆ.
- ಇದು ಏಳು ಕ್ರಾಂತಿಗಳನ್ನು ಒಳಗೊಂಡಿದೆ – ರಾಜನೈತಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಬೌದ್ಧಿಕ, ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ಕ್ರಾಂತಿಗಳು.
- ಸಂಪೂರ್ಣ ಕ್ರಾಂತಿಯನ್ನು ನಾನು ಅರ್ಥೈಸುವುದು, ಸಮಾಜದ ಅತ್ಯಂತ ಹಿಂದುಳಿದ ವ್ಯಕ್ತಿಯ ಸತ್ತೆಯ ಮೇಲೆ ಆರೂಢವಾಗುವುದು ಮತ್ತು ತನ್ಮೂಲಕ ಬದಲಾವಣೆಯ ಹರಿಕಾರನಾಗುವುದು. ಇದು ಲೋಕನಾಯಕರ 'ಸಂಪೂರ್ಣ ಕ್ರಾಂತಿ'ಯ ವ್ಯಾಖ್ಯಾನ.
- ವ್ಯವಸ್ಥೆಯಿಂದ ಹುಟ್ಟಿರುವ ಪ್ರಸಕ್ತ ಸವಾಲುಗಳು ಬಹುಮುಖಿಯಾಗಿರುವಂಥದ್ದು. ಇವುಗಳ ಸಂಪೂರ್ಣ ಪರಿಹಾರಕ್ಕೆ ಸಮಾಜದ ಮೂಲಘಟಕವಾಗಿರುವ ವ್ಯಕ್ತಿಯಲ್ಲಿಯೇ ಬದಲಾವಣೆಯಾಗಬೇಕು. ಇದು ಜಯಪ್ರಕಾಶರ ಖಚಿತ ನಿಲುವು.
- ವ್ಯಕ್ತಿಯಲ್ಲಿನ ಹೊಸ ಬದಲಾವಣೆಗಳೇ ಸಮಾಜದ ಪ್ರಸ್ತುತ ರಚನೆಯನ್ನು ಬದಲಿಸಲು ಶಕ್ತವಾಗಿದ್ದು ಅಂತಹ ಹೊಸ ನಿಲುವೇ ರಾಜಕೀಯ ಸಹಿತ ಎಲ್ಲ ಸಾಮಾಜಿಕ ಕ್ಷೇತ್ರಗಳ ಮೂಲಸಹಿತ ಪರಿಷ್ಕಾರಕ್ಕೆ ನಾಂದಿಯಾಗಬಲ್ಲದು. ಮುಂದುವರಿದು ಇದೇ ಮಾನವನ ಶಾಂತಿಯುತ ಸಹಬಾಳ್ವೆಗೆ ದಾರಿಯಾಗುವುದು. ಇದು ಲೋಕನಾಯಕರ ಸ್ಪಷ್ಟ ನೋಟ.
- ತಾವು ಕಂಡ ಸಂಪೂರ್ಣ ಕ್ರಾಂತಿಯ ಸಾಧನೆಗೆ ಜಯಪ್ರಕಾಶರು ಕಂಡುಕೊಂಡ ಉಪಕರಣ ಯುವಜನರ ಸಂಘಟನೆಯದ್ದು.

ಅವರ ಆಶಯದಂತೆ ಯುವಕರು–ವಿದ್ಯಾರ್ಥಿಗಳು ಯುವಸಂಘಟನೆ, ಜನಸಂಘಟನೆಗಳ ಮೂಲಕ ಸಮಾಜದಲ್ಲಿ ಒಗ್ಗಟ್ಟನ್ನು ಸಾಧಿಸಬೇಕು. ಉನ್ನತ ನೈತಿಕ ಮೌಲ್ಯಗಳು ಮತ್ತು ಸದಾಚರಣಗಳೇ ಸಂಘಟನೆಯನ್ನು ಮುನ್ನಡೆಸುವ ಶಕ್ತಿಗಳಾಗಬೇಕು.


## ರಾಷ್ಟ್ರೀಯ ಪುನರುತ್ಥಾನ
### ಬಿಳಲು–ಹೊಳಲು

ಮಾರುಕಟ್ಟೆಯಲ್ಲಿ ಲಭ್ಯ...

ಆರ್‌ಎಸ್‌ಎಸ್ ಶತಮಾನದ ಸಂಭ್ರಮದಲ್ಲಿ

1925ರಲ್ಲಿ ನಾಗಪುರದಲ್ಲಿ ಆರಂಭಗೊಂಡ ಆರ್‌ಎಸ್‌ಎಸ ಇಂದು ದೇಶವ್ಯಾಪಿ ಸಾಮಾಜಿಕ, ರಾಷ್ಟ್ರೀಯ ಸ್ತರದ ಸಮಸ್ಯೆಗಳಿಗೆ ತನ್ನದೇ ವಿಧಾನಗಳ ಮೂಲ ಪರಿಹಾರ ಸಾಧಿಸಲು ದೃಢಹೆಜ್ಜೆಗಳನ್ನು ಮುಂದಿಡುತ್ತಿರುವ ರಾಜಕೀಯೇತರ ಸಂಘಟನೆ. ಶತಮಾನದ ಸಂಭ್ರಮದಲ್ಲಿರುವ ಸಂಘವು ರಾಷ್ಟ್ರೀಯ ಪುನರುತ್ಥಾನದ ಹಾದಿಯಲ್ಲಿ ಗಳಿಸಿರುವ ಬಿಳಲು, ಹೊಳಹುಗಳ ಸಂಕ್ಷಿಪ್ತ ಪರಿಚಯವನ್ನು ಈ ಪುಸ್ತಕದಲ್ಲಿ ಕಾಣಬಹುದು. ಹಲವು ಅಪರೂಪದ ಸಂಗತಿಗಳನ್ನು ಲೇಖಕರು ಇಲ್ಲಿ ಬೆಳಕು ಕಾಣಿಸಿದ್ದಾರೆ.

- ಸಂಘಸ್ಥಾಪಕರ ಹಲವು ಅಪ್ರಕಟಿತ ಸ್ವಲಿಖಿತ ಪತ್ರಗಳು – ಕನ್ನಡದಲ್ಲಿ ಮೊದಲ ಬಾರಿಗೆ
- 1925–40ರ ಅವಧಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಎದುರಿಸಿದ ನಾಲ್ಕು ಬಗೆಯ ವಿರೋಧಗಳು – ಅದರ ನಿವಾರಣೆಗೆ ಮುಂದಾದ ಸಂಘ ಸ್ಥಾಪಕರು (ಅವರೇ ಬರೆದ ಪತ್ರಗಳ ಆಧಾರ)
- ರಾಷ್ಟ್ರೀಯ ಪುನರುತ್ಥಾನಕ್ಕಾಗಿ, ರಾಷ್ಟ್ರಮಾನಸ ಕಟ್ಟಲು ಸಂಘ ಕೈಗೊಂಡ ನಿಲವುಗಳು
- ಮೂರು ಪ್ರತಿಬಂಧಗಳು– ಅದನ್ನೆದುರಿಸಿ ಮೇಲೆದ್ದು ಕೈಗೊಂಡ ಚಟುವಟಿಕೆಗಳು
- ವಿಭಜನೆಯ ಸಮಯದಲ್ಲಿ ಸಂಘ ಕೈಗೊಂಡ ಸೇವಾಕಾರ್ಯ, ಪ್ರಾಣರಕ್ಷಣೆ, ಪುನರ್ವ್ಯವಸ್ಥೆ ಪ್ರಯತ್ನಗಳು
- ವಿದೇಶೀ ಆಕ್ರಮಣದ ಸಂದರ್ಭದಲ್ಲಿ ಸರಕಾರಕ್ಕೆ ನೀಡಿದ ಸಹಕಾರ
- 2025: ನಿರೀಕ್ಷಿತ ಸಂಘ ಬೆಳವಣಿಗೆಯ ಮುನ್ನೋಟ




- ಲೇಖಕರು: ಕಾ.ಶ್ರೀ. ನಾಗರಾಜ • ಬೆಲೆ: ರೂ. 150.00

ಪ್ರತಿಗಳಿಗಾಗಿ ಸಂಪರ್ಕಿಸಿ: ಕಾ. ಶ್ರೀ. ನಾಗರಾಜ, ದೂರವಾಣಿ: 080–26610081

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: **ಪುಂಗವ,** #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮೊ: 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.